

# ಮಿಂಚುತ್ತಿರುವ ಖುರಾನಾ

ಬಾಲಿವುಡ್‌ನಲ್ಲಿ ಕೇವಲ ಪ್ರತಿಭೆಯ ಬಲದಿಂದಲೇ ಮೇಲೆ ಬರುತ್ತಿರುವವರ ಸಂಖ್ಯೆ ಇತ್ತೀಚೆಗೆ ಹೆಚ್ಚಾಗುತ್ತಿದೆ. ಈ ಸರಣಿಗೆ ಹೊಸ ಸೇರ್ಪಡೆ ಆಯುಷ್ಮಾನ್ ಖುರಾನಾ. 'ಆರ್ಟಿಕಲ್ 15' ಚಿತ್ರದಲ್ಲಿ ಈತನ ಗಂಭೀರ ನಟನೆಯ ಬಳಿಕ ಬಾಲಿವುಡ್‌ನ ಹಲವು ಖ್ಯಾತ ನಿರ್ದೇಶಕರು ಈತನನ್ನು ಹೊಸ ದಿಕ್ಕಿನಲ್ಲಿ ನೋಡುತ್ತಿದ್ದಾರೆ. ಚಿತ್ರರಂಗಕ್ಕೆ ಬಂದ ಆರಂಭದಲ್ಲಿ ತಮಾಷೆಯ ಪಾತ್ರಗಳ ಮೂಲಕವೇ ಮಿಂಚಿದವನು ಈ ಖುರಾನಾ. ವಿಕಿ ಡೋನರ್, ಧಮ್ ಲಗಾಕೆ ಹೈಸಾ, ಬರೇಲಿ ಕಿ ಬರ್ಫಿ, ಶುಭ್ ಮಂಗಲ್ ಸಾವಧಾನ್, ಅಂಧಾಧುನ್, ಬಧಾಯಿ ಹೊ– ಮುಂತಾಗಿ ಈತನ ಹಿಟ್ ಚಿತ್ರಗಳೆಲ್ಲ ತಮಾಷೆ, ಲೇವಡಿಗಳ ಹೊದಿಕೆ ಇದ್ದ ಚಿತ್ರಗಳೇ. 'ಆರ್ಟಿಕಲ್ 15' ಈತನ ಇಮೇಜನ್ನೇ ಬದಲಿಸಿದಂತಿದೆ.

ಹೊಸ ಚಿತ್ರ 'ಡ್ರೀಮ್ ಗರ್ಲ್' ಮೂಲಕ ಆಯುಷ್ಮಾನ್ ಮತ್ತೆ ಸುದ್ದಿ ಮಾಡುತ್ತಿದ್ದಾನೆ. 'ಈ ಚಿತ್ರ ನನ್ನ ಜೀವನದ ಅತಿದೊಡ್ಡ ಕಮರ್ಷಿಯಲ್ ಚಿತ್ರ' ಎನ್ನುವುದು ಆತನ ಮಾತು. ಯೂಟ್ಯೂಬ್‌ನಲ್ಲಿ ಈ ಚಿತ್ರದ ವಿಡಿಯೊವನ್ನು ಒಂದೇ ದಿನದಲ್ಲಿ ಒಂದೂವರೆ ಕೋಟಿ ಜನರು ನೋಡಿ ವೀಕ್ಷಿಸಿದ್ದು ನೋಡಿ ಥ್ರಿಲ್ ಆಗಿದ್ದಾನೆ. ಹೀರೋಯಿನ್ ನುಸ್ರತ್ ಬರೂಚಾ ಜೊತೆಗೆ ಆಯುಷ್ಮಾನ್‌ನ ಹಾಡಿನ ದೃಶ್ಯವೊಂದು ಈಗಲೇ ಸುದ್ದಿ ಮಾಡುತ್ತಿದೆ. ■

# ಮಲೈಕಾ ಫ್ಯಾಷನ್

ಬಾಲಿವುಡ್‌ನಲ್ಲಿ ಕೆಲವರಿರುತ್ತಾರೆ– ಕೈಯಲ್ಲಿ ಒಂದೂ ಸಿನಿಮಾ ಇರುವುದಿಲ್ಲ, ಆದರೆ 'ನಂಬರ್ ಒನ್' ಬ್ಯುಸಿ ನಟಿಯರಿಗಿಂತ ಹೆಚ್ಚು ಸುದ್ದಿಯಲ್ಲಿರುತ್ತಾರೆ. ಮಲೈಕಾ ಅರೋರಾಳನ್ನೇ ತೆಗೆದುಕೊಳ್ಳಿ– ಕಳೆದ 19 ವರ್ಷಗಳಲ್ಲಿ ಯಾವ ಒಂದು ಸಿನಿಮಾದಲ್ಲೂ ಆಕೆ ಪ್ರಮುಖ ಎನ್ನಬಹುದಾದ ಪಾತ್ರದಲ್ಲಿ ನಟಿಸಿಲ್ಲ. ಆದರೆ ಇವತ್ತಿಗೂ ಬಾಲಿವುಡ್‌ನಲ್ಲಿ ಪ್ರತಿದಿನ ಸುದ್ದಿಯಲ್ಲಿರುವ ಚಾಕಚಕ್ಯತೆ ಆಕೆಗೆ ಸಿದ್ಧಿಸಿದೆ. ಅದಕ್ಕೆ ಮುಖ್ಯ ಕಾರಣ ಆಕೆಯ ಫಿಟ್‌ನೆಸ್ ಮತ್ತು ಫ್ಯಾಷನ್ ಪ್ರಜ್ಞೆ.

ದೊಡ್ಡ ಹೀರೊಗಳ ಸಿನಿಮಾದ ಯಾವುದೋ ಒಂದು ದೃಶ್ಯದಲ್ಲಿ ಐದು ನಿಮಿಷ ಮೈಕೈ ಕುಣಿಸಿದರೆ ಸಾಕು, ಆ ಸಿನಿಮಾ ಹಿಟ್ ಆಗುವಲ್ಲಿ ಈಕೆಯ ಪಾತ್ರವೂ ಇದೆ ಎಂದು ದೇಶದಾದ್ಯಂತ ಸುದ್ದಿಯಾಗುತ್ತದೆ. ಅದು ಸುಳ್ಳೂ ಅಲ್ಲ; ಛೈಯ ಛೈಯ, ಅನಾರ್ಕಲಿ ಡಿಸ್ಕೊ ಚಲಿ, ಮುನ್ನೀ ಬದ್ನಾಮ್ ಹುಯಿ ಮುಂತಾದ ಬಾಲಿವುಡ್‌ನ ಸೂಪರ್ ಹಿಟ್ ಹಾಡುಗಳು ಈಕೆಯನ್ನು ಖ್ಯಾತಿಯ ಉತ್ತುಂಗಕ್ಕೇರಿಸಿವೆ. ಅದೆಲ್ಲ ಹಳೆಯ ಕಥೆಯಾಯ್ತು. ಸದ್ಯಕ್ಕೆ ಮಲೈಕಾ ಏನು ಮಾಡುತ್ತಿದ್ದಾಳೆ ಎಂದು ಕೇಳಿದರೆ, ಕಳೆದ ಎರಡು ವರ್ಷಗಳಿಂದಲೂ ಸಿಗುತ್ತಿರುವ ಉತ್ತರ 'ಪ್ರೀತಿ ಮಾಡುತ್ತಿದ್ದಾಳೆ' ಎಂದೇ. ಪ್ರಿಯಕರ ಅರ್ಜುನ್ ಕಪೂರ್ ಮತ್ತು ಈಕೆಯ ಸುತ್ತಾಟದ ಚಿತ್ರಗಳೇ ಕಳೆದ ಒಂದು ವರ್ಷದಿಂದ ಸಾಮಾಜಿಕ ಜಾಲತಾಣದಲ್ಲಿ ರಾರಾಜಿಸುತ್ತಿವೆ. ಮದುವೆಯ ಬಗ್ಗೆಯೂ ಸುದ್ದಿಗಳು ಹಬ್ಬಿವೆ. 45ರ ಹರೆಯದ ಮಲೈಕಾ, ತನಗಿಂತ 11 ವರ್ಷ ಚಿಕ್ಕವನಾದ ಅರ್ಜುನ್ ಕಪೂರ್ ಜೊತೆಗೆ ಮದುವೆ ಆಗುವುದು ಖಂಡಿತ ಎಂದು ಬಹುತೇಕ ಬಾಲಿವುಡ್ ನಂಬಿಕೊಂಡಿದೆ.

ತನ್ನ ಮತ್ತು ಅರ್ಜುನ್ ಕಪೂರ್ ಕೂಡಿಕೆಯ ಬದುಕಿನ ಕುರಿತು ಲಘು ಮಾತುಗಳನ್ನು ಆಡುವವರ ಬಗ್ಗೆ ಮಲೈಕಾಳದ್ದು ನಿರ್ಲಕ್ಷ್ಯದ ನೋಟ. 'ಆಡುವವರ ಬಾಯಿ ಕಟ್ಟಲಾಗುತ್ತದೆಯೆ? ನನಗೆ ಬೇರೆ ಕೆಲಸ ಇದೆ. ನನ್ನ ಯೋಗ ಸ್ಟುಡಿಯೊ ಚೆನ್ನಾಗಿ ಬ್ಯುಸಿನೆಸ್ ಮಾಡುತ್ತಿದೆ. ಜೊತೆಗೆ ರಿಯಾಲಿಟಿ ಟೀವಿ ಷೋಗಳಲ್ಲೂ ಬ್ಯುಸಿಯಾಗಿದ್ದೇನೆ' ಎಂದು ನಗುತ್ತಾಳೆ ಮಲೈಕಾ.

ಸದ್ಯಕ್ಕೆ ಸಿನಿಮಾಗಳಲ್ಲಿ ಕುಣಿತದ ಅವಕಾಶ ಇಲ್ಲದಿದ್ದರೂ ಫಿಟ್‌ನೆಸ್ ಮತ್ತು ಫ್ಯಾಷನ್ ವಿಷಯದಲ್ಲಿ ಮಲೈಕಾಳನ್ನು ಹಿಂದಿಕ್ಕುವವರಿಲ್ಲ. ಆಕೆಯ ಪ್ರತಿಯೊಂದು ನಡೆಯೂ ಛಾಯಾಗ್ರಾಹಕರನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತಿದೆ. ಹಾಗೆಂದೇ ಆಕೆ ಸದಾ ಸುದ್ದಿಯ ಮುಂಚೂಣಿಯಲ್ಲಿದ್ದಾಳೆ.

■ ಬಿಂದು

